# ರಾಜ ಮೆರವಣಿಗೆಯ ದೃಶ್ಯ ವೈಭವ



ಈ ಆನೆಯ ಶಿಲ್ಪ ಕಾಣಿಸಿದ್ದು ಒಡಿಶಾ ರಾಜ್ಯದ ಭುವನೇಶ್ವರದಿಂದ 10 ಕಿ.ಮೀ. ದೂರದಲ್ಲಿರುವ ಉದಯಗಿರಿ ಗುಹೆಯಲ್ಲಿ. ಖಂಡಲ್‌ಗಿರಿ ಉದಯಗಿರಿ ಗುಹೆಗಳು ಹಿಂದೆ ಬೌದ್ಧ ಬಿಕ್ಕುಗಳ ನೆಲೆಯಾಗಿದ್ದವಯ. ಇಲ್ಲಿರುವ ಗಣೇಶ ಗುಹಾ ಮುಂಭಾಗದ ಎರಡೂ ಬದಿಯಲ್ಲಿ, ಸೊಂಡಿಲಿನಲ್ಲಿ ಬಾಳೆಗೊನೆ ಹಿಡಿದಿರುವ ಆನೆಗಳ ಶಿಲ್ಪಗಳನ್ನು ಬಹಳ ನಾಜೂಕಾಗಿ, ಸುಂದರವಾಗಿ ಕೆತ್ತಲಾಗಿದೆ. 2ನೇ ಶತಮಾನದಲ್ಲಿ ನಿರ್ಮಿಸಲಾಗಿರುವ ಈ ಗುಹೆಯ ಪ್ರವೇಶ ದ್ವಾರವು ಜಗಲಿಯಂತೆ ವಿಶಾಲವಾಗಿದ್ದು, ಮೂರು ಸ್ತಂಭಗಳನ್ನೊಳಗೊಂಡಿದೆ. ಮೇಲ್ಭಾಗದಲ್ಲಿ ಆನೆಯ ಮೇಲೆ ರಾಜನ ಮೆರವಣಿಗೆಯ ದೃಶ್ಯಗಳ ಕೆತ್ತನೆ ಕಂಡುಬರುತ್ತದೆ. ಗರ್ಭಗುಡಿಯ ಒಳಭಾಗ ಖಾಲಿಯಿದ್ದು, ಹಿಂದೆ ಅಲ್ಲಿ ಗಣೇಶನ ವಿಗ್ರಹವಿತ್ತೆಂದು ಶಾಸನದಲ್ಲಿ ಹೇಳಲಾಗಿದೆ. ಶಿಥಿಲಗೊಂಡ ಗುಹೆಯ ಕೆಲವು ಭಾಗಗಳನ್ನು ಪುರಾತತ್ವ ಇಲಾಖೆ ವತಿಯಿಂದ ಜೀರ್ಣೋದ್ಧಾರ ಮಾಡಲಾಗಿದೆ. ಶತಮಾನಗಳೇ ಕಳೆದರೂ ಇಲ್ಲಿನ ಶಿಲ್ಪಕಲೆ ಇಂದಿಗೂ ಜೀವಂತಿಕೆ ಉಳಿಸಿಕೊಂಡಿರುವುದು ಸೋಜಿಗದ ಸಂಗತಿ.

–ಕೆ.ಟಿ. ಜಯಶ್ರೀ, ಹಾಸನ



# ಇದು ಕಟ್ಟಿರುವೆ ಗೂಡಿನ ಕೌಶಲ

ಈ ಜಗತ್ತಿನ ಅತ್ಯಂತ ಕ್ರಿಯಾಶೀಲ ಜೀವಿಗಳಲ್ಲಿ ಇರುವೆ ಕೂಡ ಒಂದು. ಇರುವೆಗಳು ಮನುಷ್ಯನ ರೀತಿಯಲ್ಲಿ ಭೂಮಿಯ ಕೆಳಗಡೆ ದೊಡ್ಡ ದೊಡ್ಡ ಸಾಮ್ರಾಜ್ಯವನ್ನೇ ಕಟ್ಟುತ್ತವೆ ಎನ್ನುವುದು ಈಗಾಗಲೇ ಸಂಶೋಧನೆಗಳಲ್ಲಿ ಕಂಡುಬಂದಿದೆ. ಕಪ್ಪು ಇರುವೆಗಳ (ಕಟ್ಟಿರುವೆ) ಈ ಗೂಡು ನಮ್ಮ ತೋಟದಲ್ಲಿ ಕಂಡಿತು. ಕೆಲಸಗಾರ ಇರುವೆಗಳು ಭೂಮಿಯ ಒಳಗಿನ ಮಣ್ಣನ್ನು ಹೊರಗಡೆ ಹಾಕಿ ಗೂಡನ್ನು ನಿರ್ಮಾಣ ಮಾಡುತ್ತವೆ. ಇದರ ಒಳಗೆ ತಮಗೆ ಬೇಕಾದ ಸಾಮಗ್ರಿಗಳನ್ನು ಸಂಗ್ರಹ ಮಾಡಿ ಅಗತ್ಯ ಬಂದಾಗ ಬಳಸುತ್ತವೆ. ಇಲ್ಲಿ ಇರುವೆಗಳಿಗೆ ವಾಸ ಮಾಡಲು ಪ್ರತ್ಯೇಕ ಕೊಠಡಿಯೂ ಇರುತ್ತದೆ.

ಗೊತ್ತಿಲ್ಲದೇ ಮನುಷ್ಯರು ಈ ಗೂಡನ್ನು ತುಳಿದರೆ ಮುಗಿದೇ ಹೋಯಿತು. ಮತ್ತೆ ಎಂದಿಗೂ ಹತ್ತಿರ ಬರಬಾರದು ಎನ್ನುವ ರೀತಿ ಕಚ್ಚಿ ಗಾಯಗೊಳಿಸುತ್ತವೆ ಈ ಕಪ್ಪು ಇರುವೆಗಳು! ನಾವು ಎಚ್ಚರದಿಂದ ಗಮನಿಸಿದರೆ ತೋಟದ ತುಸು ಎತ್ತರದ ಸ್ಥಳಗಳಲ್ಲಿ ನೀರು ಹೆಚ್ಚು ಬೀಳದ ಕಡೆ ಈ ರೀತಿಯ ಗೂಡುಗಳು ಕಂಡುಬರುತ್ತವೆ.

–ಅರುಣ್ ಕಿಲ್ಲೂರು

# ಕಾಡು ಸೇರಿತೇ ಸಾರಿಗೆ ಬಸ್ಸು



ಕಾಡು ಬಾ ಎಂದಾಗ ಸಹಕಾರ ಸಾರಿಗೆ ಒಲ್ಲೆ ಎಂದೀತೆ... ಈ ಚಿತ್ರವನ್ನು ಕಂಡಾಗ ಮನಸಿಗೆ ಬರುವ ಮಾತಿದು. ಚಿತ್ರದಲ್ಲಿರುವುದು ವಾನಪ್ರಸ್ಥಕ್ಕೆ ಮುಂಚಿತವಾಗಿಯೇ ಕಾಡು ಸೇರಿದ ಮಲೆನಾಡಿನ ಹೆಮ್ಮೆಯ ಸಹಕಾರ ಸಾರಿಗೆಯ ಒಂದು ನೊಂದ ಜೀವ. ಒಂದು ಕಾಲದಲ್ಲಿ ಮಲೆನಾಡಿನ ಮೂಲೆಮೂಲೆಗಳಿಗೂ ಸಂಪರ್ಕ ಕಲ್ಪಿಸಿ ಮನೆಮಾತಾಗಿದ್ದ ಸಹಕಾರ ಸಾರಿಗೆಯ ಬಸ್ಸೊಂದು ಕೊಪ್ಪದ ಕಾಡ ನಡುವಿನ ರಸ್ತೆಯೊಂದರ ಬದಿಯಲ್ಲೇ ನಿಂತು ತುಕ್ಕು ಹಿಡಿಯುತ್ತಿರುವ ದೃಶ್ಯ ನಿಜವಾಗಿಯೂ ಸಹಕಾರ ಸಾರಿಗೆ ಪ್ರೇಮಿಗಳ ಕರುಳು ಹಿಂಡುತ್ತದೆ. ಯಾರೋ ಮಾಡಿದ ತಪ್ಪಿಗಾಗಿ ಅವಸಾನ ಕಂಡ ಈ ಸಂಸ್ಥೆಯ ಎಲ್ಲ ಬಸ್ಸುಗಳೂ ಇದೇ ರೀತಿ ಕಾಡುಪಾಲಾಗಿವೆ. ಇಂದು ಕೊಪ್ಪ, ಗಡಿಕಲ್ಲು, ಅಂಬುತೀರ್ಥ, ಶೃಂಗೇರಿ, ಕೊಟ್ಟಿಗೆಹಾರ, ಕುದುರೆಮುಖ, ಮೇಲ್ಪಾಲ್, ಬಸವಾನಿ ಮೊದಲಾದ ಗ್ರಾಮಾಂತರ ಪ್ರದೇಶದಲ್ಲಿ ಸಾರಿಗೆ ಸೌಲಭ್ಯವೇ ಇಲ್ಲದೇ ಜನರು ನರಳುವಂತಾಗಿದೆ. ಸಹಕಾರ ತತ್ವದಡಿ ಜನರಿಗೆ ಅಗತ್ಯ ಸೇವೆ ಸಲ್ಲಿಸಿದ್ದ ಈ ಬಸ್ಸುಗಳನ್ನು ಇಂದು ಕಾಡಿನ ಮರಗಿಡಬಳ್ಳಿಗಳು ಅಪ್ಪಿಕೊಳ್ಳುವಂತಾಗಿರುವುದು ದುರಂತ.

–ವಾ. ಮುರಳೀಧರ, ತೀರ್ಥಹಳ್ಳಿ